# ಕಾರುಣ್ಯ, ಕನಿಕರ, ಸಹಾನುಭೂತಿ

1942 ರಲ್ಲಿ ನಡೆದ ಇದು ಒಂದು ಸತ್ಯ ಕತೆ. ಆ ಕಾಲದಲ್ಲಿ MBBS ಪದವಿ ಪಡೆಯುವ ಮೊದಲು LCPS ಪದವಿ ಪಡೆದು ಪ್ರ್ಯಾಕ್ಟೀಸ ಮಾಡುವ ಸೌಲಭ್ಯವಿತ್ತು. ನನ್ನ ತಂದೆ, ಡಾ. ಆರ್. ಎಚ್. ಕುಲಕರ್ಣಿ, LCPS ಪದವಿ ಪಾಸಾಗಿ ಸರಕಾರಿ ಆಸ್ಪತ್ರೆಯ ನೌಕರಿಗಾಗಿ ಪ್ರಯತ್ನಿಸುತ್ತಿದ್ದರು. ನೌಕರಿ ಸಿಕ್ಕ ಮೇಲೆ ಅವರನ್ನು ಕರ್ನಾಟಕ - ಮಹಾರಾಷ್ಟ್ರದ ಸೀಮೆಯಲ್ಲಿರುವ ಮಲೆನಾಡಿನಲ್ಲಿಯ ಚಂದಗಡ ಎಂಬ ಹಳ್ಳಿಯ ಆಸ್ಪತ್ರೆಗೆ ರುಜುವಾಗಲು ಆದೇಶಿಸಲಾಯಿತು. ಆಗ ಅವರ ವಯಸ್ಸು 22 - 23 ವರುಷ ಇರಬಹುದು. ಇನ್ನೂ ಮದುವೆಯಾಗಿರಲಿಲ್ಲ. ಆಸ್ಪತ್ರೆಯ ಮಗ್ಗುಲಲ್ಲಿರುವ ಕೋಣೆಗಳಲ್ಲಿ ಒಬ್ಬರೇ ಇರುತ್ತಿದ್ದರು. ಚಿಕ್ಕ ಹಳ್ಳಿಯಿಂದಾಗಿ ಅಲ್ಲಿ ಕೆಲಸ ಕೂಡ ಅಷ್ಟಿರಲಿಲ್ಲ. ಮೈಯಲ್ಲಿ ಜ್ವರವೆಂದು ಇಲ್ಲವೆ ಇಂಜೆಕ್ಷನ್ ಚುಚ್ಚಿಸಲೆಂದು ಬೇನೆ ಬಿದ್ದವರು ಬರುತ್ತಿದ್ದರು. ಕೈಯಲ್ಲಿ ಕೈತುಂಬ ಕೆಲಸವಿಲ್ಲದ್ದರಿಂದ ತಂದೆಗೆ ಬೇಜಾರು.

ಜುಲೈ ತಿಂಗಳು. ಮಲೆನಾಡಿನ ಜಡಿ ಮಳೆ. ಇಡೀ ರಾತ್ರಿ ಸುರಿಯುತ್ತಿತ್ತು. ಆ ನಡುರಾತ್ರಿ ಕೋಣೆಯ ಚಿಲುಕವನ್ನು ಜೋರುಜೋರಾಗಿ ಹೊಡೆಯುವ ಸಪ್ಪಳ. ಕದ ತೆಗೆದು ಹೊರಬಂದಾಗ ಕಪ್ಪು ಕತ್ತಲೆಯಲ್ಲಿ ಹತ್ತಾರು ಜನರು ಕೈಯಲ್ಲಿ ಡೊಣ್ಣೆ ಹಿಡಿದುಕೊಂಡು, ಮೈತುಂಬ ಕಂಬಳಿ ಸುತ್ತಿಕೊಂಡು ಮನೆಯನ್ನು ಮುತ್ತಿದ್ದರು. ಅಲ್ಲಿಯೇ ಮಗ್ಗುಲಲ್ಲಿ ಎರಡು ಎತ್ತಿನ ಬಂಡಿಗಳು ನಿಂತಿದ್ದವು. ಅಷ್ಟರಲ್ಲಿ ಒಬ್ಬ ಮುಂದೆ ಬಂದು ಡಾಕ್ಟರ ಬ್ಯಾಗನ್ನು ತೆಗೆದುಕೊಂಡು ಅವರ ಜತೆ ಬರಲು ಆಜ್ಞೆ ಕೊಟ್ಟನು. ಅಂಥ ಸುರಿಮಳೆಯಲ್ಲಿ ಒಂದೆರಡು ಗಂಟೆಯ ನಂತರ ಬಂಡಿ ಒಂದು ಮನೆ ಎದುರಿಗೆ ಬಂದು ನಿಂತಿತು.

ಡೊಣ್ಣೆ ಹಿಡಿದವರಲ್ಲಿಯ ಒಬ್ಬನು ನನ್ನ ತಂದೆಯನ್ನು ಕೋಣೆಯಲ್ಲಿ ನೂಕಿ ಮೂಲೆಯಲ್ಲಿ ಕುಳಿತಿರುವ ಹದಿನೇಳು ವರುಷದ ಹುಡುಗಿಯ ಹೆರಿಗೆ ಮಾಡುವ ಅಪ್ಪಣೆ ಕೊಟ್ಟು ಹೊರಗಿನಿಂದ ಚಿಲುಕ ಹಾಕಿ ಹೋದನು. ಆ ಕೋಣೆಯ ಮೂಲೆಯಲ್ಲಿ ಒಂದು ಚಿಕ್ಕ ದೀವಿಗೆ ಉರಿಯುತ್ತಿತ್ತು. ಉಳಿದೆಲ್ಲ ಕಡೆ ಕಗ್ಗತ್ತಲೆ. ಹುಡುಗಿಯ ಮಗ್ಗುಲಲ್ಲಿ ಒಂದು ಮುದುಕಿ ಕುಳಿತಿದ್ದಳು. ಅವಳಿಗೆ ಕಿವಿ ಕೇಳಿಸುತ್ತಿರಲಿಲ್ಲ.

ನನ್ನ ತಂದೆಯವರು ಕಿರಿವಯಸ್ಸಿನವರು. ಹೆರಿಗೆಯ ಅನುಭವವಿರಲಿಲ್ಲ. ಸಾಕಷ್ಟು ಅಂಜಿಕೆ ಬೇರೆ. ಆದರೆ ಹುಡುಗಿ ಬಹು ಧೈರ್ಯ ಉಳ್ಳವಳು.

"ಡಾಕ್ಟರರೆ, ನನಗೆ ಸಾಯಬೇಕಾಗಿದೆ. ನನ್ನ ತಂದೆ ಇಲ್ಲಿಯ ದೊಡ್ಡ ಜಮೀನದಾರರು. ಐದು ನೂರು ಎಕರೆ ಸಾಗುವಳಿ ಭೂಮಿ ಇದೆ. ನಾನು ಹುಡುಗಿ ಎಂದು ಎಲ್ಲರ ಜತೆ ಶಾಲೆಗೆ ಕಳಿಸಲಿಲ್ಲ. ಒಬ್ಬ ಮಾಸ್ತರರು ಮನೆಗೆ ಬಂದು ಪಾಠ ಕಲಿಸುತ್ತಿದ್ದರು. ಏನಾಯಿತೋ ಗೊತ್ತಿಲ್ಲ. ನಾನು ಅವರನ್ನು ಪ್ರೀತಿಸತೊಡಗಿದೆ. ಮುಂದೆ ಗರ್ಭಿಣಿಯಾದೆ. ಮಾಸ್ತರರು ಜೀವ ಉಳಿಸಲೆಂದು ಒಂದು ದಿನ ಓಡಿ ಹೋದರು. ನನ್ನ ಮನೆಯವರು ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಗರ್ಭವನ್ನು ನಶಿಸಲು ಸಾಕಷ್ಟು ಪ್ರಯತ್ನ ಮಾಡಿದರು. ಏನೂ ಪ್ರಯೋಜನವಾಗಲಿಲ್ಲ. ಮನೆತನದ ಮಾನ ಕಾಯಲು ಈ ಕಿವುಡು ಮುದಿಕೆಯ ಜತೆ ಈ ಕತ್ತಲು ಕೋಣೆಯಲ್ಲಿ ಇಟ್ಟಿದ್ದಾರೆ. ನನಗೆ ಹೆರಿಗೆ ಬೇಡ. ನನ್ನನ್ನು ಕೊಂದು ಬಿಡಿ. ಹೊರಗೆ ಕುಳಿತವರಿಗೆ ಬೆಳಗಾವಿಗೆ ಒಯ್ಯಬೇಕಾಗುತ್ತದೆ ಎಂದು ಹೇಳಿ. ದಾರಿಯಲ್ಲಿ ನಾನು ಸತ್ತರೆ ಒಳ್ಳೆಯದಾಗುತ್ತದೆ. ... ನನಗೆ ಸಾವು ಬೇಕು.."

"ಡಾಕ್ಟರರ ಕೆಲಸ ರೋಗಿಯ ಜೀವವನ್ನು ಉಳಿಸುವದು, ಕೊಲ್ಲುವದಲ್ಲ. ನಾನು ನನಗೆ ಎಷ್ಟು ಸಾಧ್ಯವಿದೆಯೋ ಅಷ್ಟು ಪ್ರಯತ್ನ ಮಾಡುವೆ." ನನ್ನ ತಂದೆ ಅವಳಿಗೆ ತಿಳಿಸಿ ಹೇಳಿದರು.

ತಾವು ಕಲಿತ  ಮೆಡಿಕಲ್ ಜ್ಞಾನವನ್ನುಪಯೋಗಿಸಿ ಅವಳನ್ನು ಮೊದಲಿಗೆ ಭತ್ತ ತುಂಬದ ಚೀಲಗಳ ಮೇಲೆ ಒಂದು ಚಾದರನ್ನು ಹಾಸಿದ  'ಹೊರಸಿ'ನ ಮೇಲೆ ಮಲಗಿಸಿದರು.  ಪ್ರತಿಕೂಲ ಸ್ಥಿತಿ ಇದ್ದರೂ  ಕೂಡ ಧೈರ್ಯದಿಂದ ಅವಳ ಹೆರಿಗೆ ಮಾಡಿ ಕೂಸನ್ನು ಬೇರ್ಪಡಿಸಿದರು. ಹುಟ್ಟಿದ ಕೂಸು ಇನ್ನು ಅತ್ತಿರಲಿಲ್ಲ. ಕೂಸಿನ ತಾಯಿಗೆ ಕೂಸು ಹೆಣ್ಣು ಮಗು ಎಂದು ಗೊತ್ತಾದ ಕೂಡಲೆ "ಡಾಕ್ಟರ, ಅವಳನ್ನು ಉಳಿಸಬೇಡಿ. ದೊಡ್ಡವಳಾದ ಮೇಲೆ ನನ್ನಂತಹ ಬವಣೆ ಅವಳಿಗೆ ಬೇಡ" ಎಂದು ಅಂಗಲಾಚಿದಳು.

ತಂದೆ ಕೇಳಲಿಲ್ಲ. ಕೂಸು ಅಳಲೆಂದು ಅದರ ತಲೆ ಕೆಳಮಾಡಿ ಬೆನ್ನಿನ ಮೇಲೆ ಎರಡು ಪೆಟ್ಟುಗಳನ್ನು ಹಾಕಿದರು. ಮಗು ಅಳತೊಡಗಿತು. ಡಾಕ್ಟರರಿಗೆ ಧೈರ್ಯ ಬಂತು. ಹೆರಿಗೆ ಕೆಲಸ ಮುಗಿಸಿ ಕೋಣೆಯ ಹೊರಗೆ ಬಂದರು. ಹೊರಗಿದ್ದವರಲ್ಲಿಯ ಒಬ್ಬನು ನನ್ನ ತಂದೆಯ ಕೈಯಲ್ಲಿ ಒಂದು ನೂರು ರೂಪಾಯಿಯ ನೋಟನ್ನು ತುರುಕಿದ. ಆ ಕಾಲದಲ್ಲಿಯ ನೂರೆಂದರೆ ಈಗಿನ 10000 ಕ್ಕೂ ಹೆಚ್ಚು. ನನ್ನ ತಂದೆ ಏನೋ ನೆವ ಮಾಡಿ ಕೋಣೆಯ ಒಳಗೆ ಹೋದರು. ಹುಡುಗಿಯ ಕೈಯಲ್ಲಿ ನೂರರ ನೋಟನ್ನಿಟ್ಟು  "ನೀನು ಹೇಗಾದರೂ ಮಾಡಿ ಇಲ್ಲಿಂದ ಪುಣೆಗೆ ಓಡಿ ಹೋಗು.. ಅಲ್ಲಿಯ ನರ್ಸಿಂಗ ಕಾಲೇಜಿನಲ್ಲಿ ನನ್ನ ಪರಿಚಯದ ಆಪಟೆ ಇದ್ದಾರೆ. ಆರ್ ಎಚ್ ಕಳಿಸಿದ್ದಾರೆಂದು ಹೇಳು. ಅವರು ನಿನಗೆ ಸಹಾಯ ಮಾಡುತ್ತಾರೆ." ಎಂದು ಹೇಳಿ ಹೊರಬಿದ್ದರು.

ಆ ಮೇಲೆ ನನ್ನ ತಂದೆ ಇದನ್ನೆಲ್ಲ ಮರೆತುಬಿಟ್ಟರು. ಮುಂದೆ ಕೆಲ ವರುಷಗಳಲ್ಲಿ ನನ್ನ ತಾಯಿಯ ಜತೆ ಅವರ ಮದುವೆಯಾಯಿತು. ನನ್ನ ತಾಯಿ ಶಾಲೆ ಶಿಕ್ಷಿಕೆ. ಅವಳು ಉಳಿತಾಯ ಮಾಡಿದ ಹಣದಿಂದಾಗಿ ನನ್ನ ತಂದೆ ಮುಂಬಯಿಗೆ ಹೋಗಿ  ಮುಂದಿನ ಅಭ್ಯಾಸ ಮಾಡಿ MBBS ಪದವಿ ಗಳಿಸಿದರು. ತಮ್ಮ 42ನೆ ವಯಸ್ಸಿನಲ್ಲಿ ಅದಕ್ಕೂ ಮುಂದಿನ MS ಪದವಿಯನ್ನು ಅವರ ನೆಚ್ಚಿನ ಗಾಯನಾಕಾಲಾಜಿ ವಿಷಯದಲ್ಲಿ ಗಳಿಸಿದರು. ಅವರ ಗೆಳೆಯರೆಲ್ಲ "ಮಕ್ಕಳೆಲ್ಲ ದೊಡ್ಡವರಾದಾಗ ನಿನಗೇಕೆ ಈ ಪದವಿ?"  ಎಂದು ತಮಾಷೆ ಮಾಡುತ್ತಿದ್ದರು. ಮೊದಲನೆ ರೋಗಿಯ ಆ ಕಹಿ ಅನುಭವದಿಂದಾಗಿ  ಮಹಿಳೆಯರ ಹೆರಿಗೆಯಲ್ಲಿ ಸಹಾಯ ಮಾಡಬೇಕೆಂಬ ಆಸೆ ಅವರಿಗೆ ಇತ್ತು.

ಮುಂದೆ ಸಾಕಷ್ಟು ವರುಷಗಳಾದ ಮೇಲೆ ಅವರು ಕೆಲಸದಿಂದ ನಿವೃತ್ತರಾದರು. ಆದರೂ ಕೂಡ ತಮ್ಮ ವಿಷಯದಲ್ಲಿಯ ಜ್ಞಾನವನ್ನು ಹೆಚ್ಚಿಸುವ ಆತುರ. ಹೀಗಾಗಿ ಮನೆಯಲ್ಲಿ ತೆಪ್ಪಗೆ ಕೂಡದೆ ಬೇರೆ ಬೇರೆ ನಗರಗಳಲ್ಲಿ ಜರುಗುವ ವಿಚಾರ ಸಂಕೀರಣ ಇಲ್ಲವೆ ಅಧಿವೇಶನಗಳಿಗೆ ಹೋಗುತ್ತಿದ್ದರು. ಹೀಗೆಯೆ ಅವರು ಒಮ್ಮೆ ಔರಂಗಾಬಾದದಲ್ಲಿಯ ಡಾಕ್ಟರರ ಸಮ್ಮೇಳನಕ್ಕೆ ಹೋಗಿದ್ದರು. ಅಲ್ಲಿ ಡಾ. ಚಂದ್ರಾ ಎಂಬ ತರುಣಿಯ ಭಾಷಣವು ಅವರಿಗೆ ಬಹಳ ಸೇರಿತು. ಅವಳನ್ನು ಈ ಬಗ್ಗೆ ವಿಚಾರಿಸಿದಾಗ ಅವಳು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಮಹಿಳೆಯರ ಉಪಚಾರ ಮಾಡುತ್ತಾಳೆಂಬುದು ಗೊತ್ತಾಯಿತು. ನನ್ನ ತಂದೆಗೆ ಬಹು ಸಂತಸ. ಇವರಿಬ್ಬರ ಮಾತುಕತೆ ನಡೆದಾಗ ಡಾಕ್ಟರರ ಓರ್ವ ಹಳೆ ಗೆಳೆಯ ಸಲಿಗೆಯಿಂದ "ಆರ್. ಎಚ್, ನೀನು ಇಲ್ಲಿ ಹೇಗೆ?"  ಎಂದು ಪ್ರಶ್ನಿಸಿದರು.  ಆರ್. ಎಚ್. ಎಂಬ ಶಬ್ದಗಳು ಕಿವಿಮೇಲೆ ಬಿದ್ದಕೂಡಲೆ ಡಾ. ಚಂದ್ರಾ ನಮ್ಮ ತಂದೆಯ ಹತ್ತಿರ ಬಂದು, "ಡಾಕ್ಟರರೆ, ನೀವು ಎಂದಾದರೂ ಚಂದಗಡದಲ್ಲಿ ಕೆಲಸ ಮಾಡಿದ್ದಿರಾ?" ಎಂದು ಕೇಳಿದಳು.
"ಹೌದು, ಹೌದು, ಬಹಳ ವರುಷಗಳ ಹಿಂದೆ...." ಡಾಕ್ಟರರು
"ಸರ್, ನೀವು ಇಂದು ನಮ್ಮ ಮನೆಗೆ ಬರಲೇಬೇಕು." ಚಂದ್ರಾಳ ಒತ್ತಾಯ.
"ಇದ್ಹೇಗೆ ಸಾಧ್ಯ, ನಾನು ಇಂದು ಮೊದಲ ಸಲ ನಿಮಗೆ ಭೆಟ್ಟಿಯಾಗುತ್ತಿದ್ದೇನೆ. ಅಷ್ಟೊಂದು ಪರಿಚಯ ಕೂಡ ಇಲ್ಲ. ..."

ತಂದೆಯ ಉತ್ತರ.
"ಇಲ್ಲ ಸರ್, ನೀವು ನನ್ನ ಮನೆಗೆ ಬಂದರೆ ನನ್ನ ತಾಯಿಗೆ ಬಹು ಸಂತೋಷವಾಗುವದು."
ಅಂದು ಅವಳ ಮನೆ ತಲುಪಿದಾಗ ಸ್ವಲ್ಪ ನರೆತ ಕೂದಲಿರುವ ವಯಸ್ಸಾದ ಮಹಿಳೆ ಅವರ ಕಾಲನ್ನೇ ಎರಗಿದಳು.
"ಚಂದಗಡದಲ್ಲಿ ಹೆರಿಗೆ ಮಾಡಿದ ನಿಮ್ಮ ಮೊದಲ ಪೇಷಂಟ ನಾನೇ. ನೀವು ಆಗ ಹೇಳಿದಂತೆ ನೀವು ಕೊಟ್ಟ ನೂರು ರೂಪಾಯಿ ತೆಗೆದುಕೊಂಡು ಆ ಹಳ್ಳಿಯಿಂದ ಓಡಿ ಪುಣೆಗೆ ತಲುಪಿದೆ. ಆಪಟೆಯವರಿಗೆ ಭೆಟ್ಟಿಯಾದೆ. ನಾನು ಹತ್ತನೆ ತೆರಿಗೆ ಕೂಡ ಪಾಸಾಗಿರಲಿಲ್ಲ. ಆದರೂ ಆಪಟೆಯವರಿಂದಾಗಿ ನನ್ನನ್ನು ನರ್ಸಿಂಗ ಕೋರ್ಸಿಗೆ ಸೇರಿಸಿಕೊಂಡರು. ನಾನು ನರ್ಸ ಆದೆ. ಮನೆಯ ಜನರು ನನ್ನನ್ನು ಹುಡುಕುತ್ತ ಪುಣೆಗೆ ಬಂದರು. ನಾನು ಮುಂಬಯಿಗೆ ಹೋದೆ. ಪೋಲಿಸರಲ್ಲಿ ದೂರು ಹಾಕುತ್ತೇನೆಂದು ಹೆದರಿಸಿದಾಗ ಸುಮ್ಮನಾಗಿ ಹಳ್ಳಿಗೆ ಹಿಂತಿರುಗಿದರು. ನಾನು ನನ್ನ ಮಗಳಿಗೆ ಡಾಕ್ಟರಾಗಲು ಪ್ರೋತ್ಸಾಹಿಸಿದೆ. ಗಾಯನಾಕಾಲಾಜಿಸ್ಟ ಆಗಿ ನಿಮ್ಮಂತೆ ಹೆಣ್ಮಕ್ಕಳ ಸೇವೆ ಮಾಡಲು ಹುರಿದುಂಬಿಸಿದೆ. "
"ನಿಮ್ಮ ಮಗಳೆಲ್ಲಿ?"
"ಈ ಚಂದ್ರಾಳೇ ನನ್ನ ಮಗಳು. ಸಾಯುವ ಮೊದಲು ಒಮ್ಮೆಯಾದರೂ ನಿಮ್ಮನ್ನು ನೋಡಬೇಕೆಂಬ ಆಸೆ. ನಿಮ್ಮನ್ನು ಹುಡುಕಲು ಸಾಕಷ್ಟು ಪ್ರಯತ್ನಿಸಿದೆ. ಆಪಟೆಯವರು ತೀರಿಕೊಂಡಿದ್ದರು. ನಿಮ್ಮ ಹೆಸರು ರಾಮಚಂದ್ರ ಎಂಬುದು ನನಗೆ ಗೊತ್ತಿತ್ತು. ನಿಮ್ಮ ನೆನಪಿಗಾಗಿ ನನ್ನ ಮಗಳ ಹೆಸರನ್ನು ಚಂದ್ರಾ ಎಂದು ಇಟ್ಟೆ. ಅವಳದೇ ಒಂದು ಹೆರಿಗೆ ಆಸ್ಪತ್ರೆ ಇದೆ. ಅದರ ಹೆಸರು ಕೂಡ ಆರ್. ಎಚ್ ಹಾಸ್ಪಿಟಲ್. ಕೆಲ ಪೇಷಂಟ್ಸಗಳಿಂದ ದುಡ್ಡು ತೆಗೆದುಕೊಂಡರೆ ಉಳಿದ ಬಡ ರೋಗಿಗಳಿಗೆ ಪುಕ್ಕಟೆ ಉಪಚಾರ."

ತಂದೆಯ ಕಣ್ಣಂಚಿನಲ್ಲಿ ಕಣ್ಣೀರು.

ಸುಧಾ ಮೂರ್ತಿ

(*ಸುಧಾ ಮೂರ್ತಿಯವರು ಇನ್ಫೊಸಿಸ ಫೌಂಡೆಶನ್ನಿನ ಮುಖ್ಯಸ್ಥರು. 16 ಆಗಸ್ಟ 2013 ರಂದು ವೆಲ್ಲೋರ ಮೆಡಿಕಲ್ ಕಾಲೇಜಿನ ಒಂದು ಸಮಾರಂಭದಲ್ಲಿ ಅವರು ಈ ಕತೆಯನ್ನು ಹೇಳಿದರು.*)